ಮತ್ತು ಕೂಡಲೇ ಸದರಿ ಒತ್ತುವರಿದಾರರ ಜಮೀನನ್ನು ಒತ್ತುವರಿ ದರಖಾಸ್ತು ಎಂದು ಖಾಯಂ ಗೊಳಿಸುವಂತೆ ಸರಕಾರವನ್ನು ಒತ್ತಾಯಿಸುತ್ತೇವೆ. ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸತತವಾಗಿ ಕಳೆದ ೨ ವರ್ಷಗಳಿಂದ ಮಳೆಯು ತೀರಾ ಕಡಿಮೆಯಾಗಿದ್ದು, ಕಳೆದ ೫೦ ವರ್ಷಗಳ ದಾಖಾಶದಂತೆ, ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ತಲಾ ೧೦ ಮಿಲಿಮಿಟರ್‌ನಷ್ಟು ಮಳೆ ಕಡಿಮೆಯಾಗಿದೆ. ಜಿಲ್ಲೆಯ ಪ್ರತಿ ಎಂಟು ತಾಲೂಕುಗಳಲ್ಲಿ, ಆದರಲ್ಲೂ ಸುಳ್ಯ ತಾಲೂಕಿನಲ್ಲಿ ೧೦ ಮಿಲಿ ಮಿಟರ್ ಮಳೆ ಕಡಿಮೆಯಾಗಿದೆ. ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಈ ಹಿಂದೆ ಬ್ರಿಟಿಷ್ ಸರಕಾರದ ಪದ್ಧತಿಯಾದ ಆರಾಣಿ ದರದ ಅಂಕಿಅಂಶಗಳಲ್ಲಿ ಲೆಕ್ಕಾಚಾರ ಮಾಡಬಾರದು. ಈ ಹಳೇ ಪದ್ಧತಿಯ ಲೆಕ್ಕಾಚಾರದಿಂದ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಂಜ ೧ನೇ, ನಂಜ ೨ನೇ, ನಂಜ ೩ನೇ ಎಂದು ಭತ್ತದ ಬೆಳೆ ಜಮೀನು ಇರುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಂಜ ೧ನೇ ಗದ್ದೆಗಳನ್ನು ಬಿಟ್ಟು ಇತರ ಜಮೀನು ಈ ವರ್ಷ ಸಾಗುವಳಿಯಾಗಿರುವುದಿಲ್ಲ. ನಂಜ ೧ನೇ ಗದ್ದೆ ಸಾಗುವಳಿ ಆಗಿದ್ದರೂ, ಬೆಳೆಗಳು ಸುಟ್ಟು ಹೋಗಿವೆ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ರಿಟಿಷ್ ಪದ್ಧತಿಯಾದ ಆರು ಆಣೆ ದಾಖಾಶ ಯದ ಅಂಕಿಅಂಶದಲ್ಲಿ ಬರಗಾಲದ ಲೆಕ್ಕಾಚಾರವನ್ನು ಮಾಡದೆ, ಮಳೆ ಸರಾಸರಿ ಅಂತರದ ಕಡಿಮೆಯ ಲೆಕ್ಕವನ್ನು ಪರಿಗಣಿಸಿ ಬರಗಾಲ ಘೋಷಣೆ ಮಾಡುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ರೆವಿನ್ಯೂ ಮಂತ್ರಿಗಳು ಊರಿನಲ್ಲಿ ಇಲ್ಲ. ಅವರು ಬಂದ ನಂತರ ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

೧೭) ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಎಸ್.ಆರ್,ಇ.ಪಿ-ಕಾರ್ಯಕ್ರಮದ ಮೇರೆಗೆ ನಿರ್ಮಿಸಲಾಗಿದ್ದ ಮನೆಗಳು

ಶ್ರೀ ಬಿ. ನಾರಾಯಣ ಸ್ವಾಮಿ.—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ನಲ್ಲಿ ಎಸ್.ಆರ್.ಇ.ಪಿ. ಕಾರ್ಯಕ್ರಮದ ಮೇರೆಗೆ ನಿರ್ಮಿಸಲಾಗಿದ್ದ ಮನೆಗಳನ್ನು ಕೆಲವು ಆಂಧ್ರ ಜನರಿಗೆ ಕೊಟ್ಟಿದ್ದು, ಆದರಲ್ಲಿ ಕೆಲವರು ಮನೆಗಳನ್ನು ಮಾರಿ ಹೋಗಿದ್ದಾರೆ. ಕೆಲವರು ಬಾಗಿಲು, ಕಿಟಕಿಗಳನ್ನು ಕಿತ್ತುಕೊಂಡು ಹೋಗಿರುತ್ತಾರೆ. ಕರ್ನಾಟಕದಲ್ಲಿನ ಹರಿಜನ ಗಿರಿಜನರಿಗೂ ಮನೆಗಳನ್ನು ಕೊಡದೆ ಆಂಧ್ರದ ಜನರಿಗೆ ಕರ್ನಾಟಕದಲ್ಲಿ ನಿರ್ಮಿಸಿದ ಮನೆಗಳನ್ನು ಕೊಡಲು ಕಾರಣರಾರೆಂಬುದನ್ನು ಸರಕಾರ ತನಿಖೆ ಮಾಡಬೇಕು. ಮನೆಗಳಿರುವವರಿಗೇ ಮನೆಗಳನ್ನು ಕೊಟ್ಟಿರುತ್ತಾರೆ. ಈಗ ಮನೆಗಳೆಲ್ಲಾ ಬಿದ್ದು ಹೋಗಿದ್ದು ಬೋರ್‌ವೆಲ್, ರಸ್ತೆಗಳಿಗೆ ವೆಚ್ಚ ಮಾಡಿದ ಹಣ ವ್ಯರ್ಥವಾಗಿದೆ. ಅಲ್ಲದೆ, ಮನೆಗಳನ್ನು ಪೂರ್ಣವಾಗಿ ನಿರ್ಮಿಸದೆ ಬಿಲ್ಲುಗಳನ್ನು ವಸೂಲು ಮಾಡಿಕೊಂಡಿದ್ದಾರೆ. ಈ ರೀತಿ ಅಪೂರ್ಣ ಮನೆಗಳಿಗೆ ಪೂರ್ಣ ಹಣವನ್ನು ವಸೂಲು ಮಾಡಿಕೊಂಡಿರುವ ಪ್ರಕರಣಗಳೆಷ್ಟು ಹಾಗೂ ಈ ಎಲ್ಲಾ ವಿಷಯದ ಬಗ್ಗೆ ಕೂಲಂಕುಷ ತನಿಖೆ ನಡೆಸಿ ಈ ಹಣ ವ್ಯರ್ಥ ಮಾಡಿದ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಇನ್ನೊಂದು ಸದನ ದಲ್ಲಿರುವುದರಿಂದ ನಂತರ ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

೧೮) ರಾಯಚೂರಿನಲ್ಲಿರುವ ಒಕ್ಕಲುತನ ಮಾರುಕಟ್ಟೆಯಲ್ಲಿ ಹತ್ತಿ ಟೆಂಡರುದಾರರು ಅಕ್ರಮ ವ್ಯವಹಾರದಲ್ಲಿ ತೊಡಗಿರುವುದು

ಶ್ರೀ ಎಂ. ವೀರಯ್ಯಸ್ವಾಮಿ.—ರಾಯಚೂರಿನಲ್ಲಿರುವ ಒಕ್ಕಲುತನ ಮಾರುಕಟ್ಟೆಯಲ್ಲಿ ಹತ್ತಿ ಖರೀದಿಸುವ ಹತ್ತಿ ಟೆಂಡರುದಾರರು ರೈತರಿಗೆ ವಿರೋಧವಾಗಿರುವ ಹಾಗೂ ಹಾನಿಯನ್ನುಂಟು ಮಾಡುವ ಕೆಳಕಂಡ ಅಕ್ರಮ ವ್ಯವಹಾರದಲ್ಲಿ ತೊಡಗಿರುವುದರಿಂದ ಅನೇಕ ರೈತರು ಅಪಾರ ಹಾನಿ ಗೀಡಾಗಬೇಕಾಗಿದೆ. ರೈತರ ಹಿತದೃಷ್ಟಿಯಿಂದ ಮಾನ್ಯ ಮಾರುಟ್ಟೆ ಮಂತ್ರಿಗಳು ಕೂಡಲೇ ಅಕ್ರಮ ಗಳನ್ನು ಸರಿಪಡಿಸಲು ಕ್ರಮಕ್ಕೆಗೊಳ್ಳಬೆ ಕೆಂದು ಕೊರುತ್ತೇನೆ.

೧) ಹತ್ತಿ ಖರೀದಿಸುವ ಟೆಂಡರದಾರರು ನಿರ್ದಿಷ್ಟ ದರಕ್ಕೆ ಖರೀದಿಸಲು ಒಪ್ಪಿಗೆ ಸೂಚಿಸಿದ ನಂತರ ವ್ಯವಹಾರವನ್ನು ರದ್ದುಪಡಿಸುತ್ತಾರೆ.

೨) ಖರೀದಿಸಿದ ಹತ್ತಿಯನ್ನು ತೂಕಮಾಡಿಕೊಂಡು ತಮ್ಮ ವಶಕ್ಕೆ ತೆಗೆದುಕೊಂಡ ನಂತರ ಒಂದೂವರೆ ತಿಂಗಳವರೆಗೆ ಹಣ ಪಾವತಿ ಮಾಡುವುದಿಲ್ಲ. ಈ ಸಮಯದ ಒಳಗಾಗಿ ಹಣ ಕೇಳಿದರೆ ನೂರಕ್ಕೆ ೨ ರಂತೆ ಇಳುವರಿಯನ್ನು ತೆಗೆದು ಉಳಿದ ಹಣ ಕೊಡುತ್ತಾರೆ.